**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿದ್ದಾಪುರ .**

**ಸಿ .ಸಿ. ನಂ.794/2023**

| **ಪಿರ್ಯಾದಿಃ** | | **ಆರೋಪಿತರುಃ** |
|---|---|---|
| ರಾಜ್ಯದ ಪರ | **ವಿರುದ್ಧ** | ಶ್ರೀಧರ ತಂದೆ ಗಣಪತಿ ಹೆಗಡೆ |
| ಸಿದ್ದಾಪುರ ಪೋಲೀಸ್ ಠಾಣೆ | | ವಯಸ್ಸುಃ **53** ವರ್ಷ, ವೃತ್ತಿಃ ಕೃಷಿ ಕೆಲಸ<br>ವಾಸಃಗದ್ದೆಮನೆ, ಚಪ್ಪರಮನೆ ಗ್ರಾಮ ಮತ್ತು ಪೋಸ್ಟ , ಸಿದ್ದಾಪುರ ತಾಲೂಕು , ಉ. ಕ ಜಿಲ್ಲೆ |

**ದೋಷಾರೋಪಣೆ**

ಶ್ರೀ ಭರತಚಂದ್ರ ಕೆ ಎಸ್, ಬಿ ಎ ,ಎಲ್‌ಎಲ್ ಬಿ ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿದ್ದಾಪುರ ಆದ ನಾನು , ಆರೋಪಿತರಾದ ನಿಮ್ಮನ್ನು ಈ ಕೆಳಕಂಡ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಸಿದ್ದಾಪುರ ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಸಿದ್ದಾಪುರದ ಚಪ್ಪರಮನೆ ಗ್ರಾಮಕ್ಕೆ ಒಳಪಡುವ ಗದ್ದೆಮನೆಯಲ್ಲಿರುವ ಚಪ್ಪರಮನೆ ಗ್ರಾಮ ಸ. ನಂ 34/4 ನೇದಕ್ಕೆ ಸಂಬಂಧಿಸಿದಂತೆ ಆರೋಪಿತನಾದ ನೀನು ಪಿರ್ಯಾದಿ ಹಾಗೂ ನಿನ್ನ ನಾದಿನಿಯ ನಡುವೆ ವ್ಯಾಜ್ಯ ಇರುವ ವಿಷಯದಲ್ಲಿ ದ್ವೇಷದಿಂದ ಇದ್ದು , ದಿಃ 19-08-2023 ರಂದು ಬೆಳಿಗ್ಗೆ 10-15 ಗಂಟೆ ಸುಮಾರಿಗೆ ಪ್ರಕರಣದ ಪಿರ್ಯಾದಿಯವರ ಮಾವ ( ಗಂಡನ ತಂದೆ) ಚಾಸಾ 4 ನೇಯವರು ಜಮೀನಿನಲ್ಲಿ ಬಿದ್ದಿದ್ದ ಮೂರು ತೆಂಗಿನಕಾಯಿಗಳನ್ನು ಹೆಕ್ಕಿಕೊಂಡು ನಿನ್ನ ಮನೆ ಎದುರು ಹಾಯ್ದು ಮಣ್ಣಿನ ರಸ್ತೆಯಲ್ಲಿ ನಡೆದುಕೊಂಡು ಮನೆ ಕಡೆಗೆ ಹೋಗುತ್ತಿದ್ದಾಗ , ಮಣ್ಣಿನ ರಸ್ತೆಯಲ್ಲಿ ಅಳವಡಿಸಿರುವ ಕಬ್ಬಿಣ ಗೇಟ್ ಹತ್ತಿರ ಬಂದಾಗ ಆರೋಪಿತನಾದ ನೀನು ಚಾಸಾ 4 ರವರನ್ನು ಉದ್ದೇಶಿಸಿ ಬೋಳಿ ಮಗನೇ , ಎಂದು ಅವಾಚ್ಯವಾಗಿ ಬೈದು ಸಾರ್ವಜನಿಕ ಶಾಂತತಾ ಭಂಗವನ್ನುಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರಿ ಎಂದು ದೋಷಾರೋಪಿಸಲಾಗಿದೆ.

ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತನಾದ ನೀನು ಚಾಸಾ 4 ರವರೊಂದಿಗೆ ಜಗಳ ತೆಗೆದು ಕೈಯಲ್ಲಿದ್ದ ಛತ್ರಿಯಿಂದ ಚಾಸಾ 4 ರವರ ತಲೆಯ ಹಿಂಭಾಗ , ಎಡ ಹಣೆಗೆ ಹೊಡೆದು ಸಾದಾ ಸ್ವರೂಪದ ರಕ್ತಗಾಯವನ್ನುಂಟು ಮಾಡುವುದರ ಮೂಲಕ ಭಾರತೀಯ ದಂಡ ಸಂಹಿತೆ ಕಲಂ

324 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರಿ ಎಂದು ದೋಷಾರೋಪಿಸಲಾಗಿದೆ.

ಮೂರನೇಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತನಾದ ನೀನು ಪಿರ್ಯಾದಿಯನ್ನು ಉದ್ದೇಶಿಸಿ , ಇನ್ನೊಮ್ಮೆ ಗದ್ದೆಯಲ್ಲಿ ಕಾಲಿಟ್ಟರೆ ಕೊಂದು ಹಾಕುತ್ತೇನೆ ಎಂದು ಜೀವ ಬೆದರಿಕೆಯನ್ನು ಹಾಕುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರಿ ಎಂದು ದೋಷಾರೋಪಿಸಲಾಗಿದೆ.

ಪ್ರಶ್ನೆಃ ಈ ಮೇಲೆ ಓದಿ ಹೇಳಲಾದ ದೋಷಾರೋಪಣೆಯು ನಿಮಗೆ ತಿಳಿಯಿತೇ?

ಉತ್ತರಃ ಆರೋಪಿಃ

ಪ್ರಶ್ನೆಃ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ವಿಚಾರಣೆ ಬಯಸುವಿರೋ?

ಉತ್ತರಃ ಆರೋಪಿಃ

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿ ಅವರು ಕೊಟ್ಟ ಉತ್ತರವನ್ನು ಅದೇ ರೀತಿ ದಾಖಲಿಸಿಕೊಳ್ಳಲಾಯಿತು ).

ದಿನಾಂಕಃ *05-04-2024* ಪ್ರ.ದ.ನ್ಯಾ. ದಂಡಾಧಿಕಾರಿ,

ಸಿದ್ದಾಪುರ .

.